■ ಹನಿ

## ಸಿರಿಕಂಠ ಸ್ತಬ್ಧ



ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳ ಲಕ್ಷಾಂತರ ಸಂಗೀತ ಪ್ರೇಮಿಗಳನ್ನು ಒಂದಾಗಿ ಬೆಸೆದಿದ್ದ ಅಪರೂಪದ ಕಂಠವೊಂದು ಸ್ತಬ್ಧವಾಗಿದೆ. ಉಭಯ ದೇಶಗಳ ಗಝಲ್ ಪ್ರಿಯರ ಕಣ್ಮಣಿಯಾಗಿದ್ದ ರೇಷ್ಮಾ (66) ಸದ್ದಿಲ್ಲದೆ ಇಹಲೋಕ ತ್ಯಜಿಸಿದ್ದಾರೆ. ತನ್ನ ವಿಶಿಷ್ಟ ಕಂಠಸಿರಿಯಿಂದ ಸಂಗೀತಪ್ರಿಯರ ಮನ ತಣಿಸುತ್ತಿದ್ದ ರೇಷ್ಮಾ ಅವರನ್ನು ಗಂಟಲ ಕ್ಯಾನ್ಸರ್ ಬಲಿ ತೆಗೆದುಕೊಂಡಿದೆ.

ರೇಷ್ಮಾ ಹುಟ್ಟಿದ್ದು ಭಾರತದ ರಾಜಸ್ತಾನದ ಬಿಕಾನೇರ್‌ನಲ್ಲಿ. ದೇಶವಿಭಜನೆಯ ಹಿನ್ನೆಲೆಯಲ್ಲಿ ಆ ಊರಿನಲ್ಲಿದ್ದ ಬಂಜಾರಾ ಕುಟುಂಬ ಕರಾಚಿಗೆ ವಲಸೆ ಹೋಯಿತು. ರೇಷ್ಮಾ ಆಗಿನ್ನೂ ಪುಟ್ಟ ಬಾಲೆ. ರೇಷ್ಮಾರ ಗಾಯನ ಪ್ರತಿಭೆ ಹೊರಜಗತ್ತಿಗೆ ಗೊತ್ತಾದದ್ದೂ ವಿಶಿಷ್ಟ ಸನ್ನಿವೇಶದಲ್ಲಿ. 12ರ ಎಳೆಯ ಬಾಲೆ ಸೂಫಿ ಸಂತ ಶಾಬಾದ್ ಕಲಂದರ್ ದರ್ಗಾದಲ್ಲಿ ಸುಶ್ರಾವ್ಯವಾಗಿ ಹಾಡುತ್ತಿದ್ದುದನ್ನು ಟಿವಿ/ರೇಡಿಯೊ ನಿರ್ಮಾಪಕನೊಬ್ಬ ಗಮನಿಸಿದ. ಬಳಿಕ ಆ ಹುಡುಗಿಯನ್ನು ಕರೆದು ಹಾಡನ್ನು ರೆಕಾರ್ಡ್ ಮಾಡಿಕೊಂಡ. ರೇಡಿಯೋದಲ್ಲಿ ಆ ಹಾಡು (ಲಾಲ್ ಮೇರಿ...) ಹಿಟ್ ಆದದ್ದೇ ಹೊಸ ಸ್ಟಾರ್ ಗಾಯಕಿಯ ಉದಯವಾಯಿತು.

1960ರಲ್ಲೇ ಪಾಕ್ ಟಿ.ವಿ ಯಲ್ಲಿ ಹಾಡಿದಾಕೆ ರೇಷ್ಮಾ. ಶಾಸ್ತ್ರೀಯವಾಗಿ ಹಾಡುಗಾರಿಕೆ ಕಲಿತವರಲ್ಲ. ಹಾಗೆಂದೇ ಇಳಿವಯಸ್ಸಿನಲ್ಲೂ ಅವರು ಹಾಡುವಾಗ ದೇಹಭಾಷೆಗಿಂತ ಹೆಚ್ಚಾಗಿ ಮಾಧುರ್ಯಕ್ಕೆ ಒತ್ತು ಸಿಗುತ್ತಿತ್ತು. ಸ್ವರಮಾಧುರ್ಯ ಯಾವ ತಡೆಯೂ ಇಲ್ಲದೆ ಸರಾಗವಾಗಿ ಚಿಮ್ಮುತ್ತಿತ್ತು. ಸಿನಿಮಾ ಉದ್ಯಮದವರು ಕೈಬೀಸಿ ಕರೆದ ಬಳಿಕವಂತೂ ರೇಷ್ಮಾಗೆ ಯಾರೂ ಸಾಟಿಯಾಗಲಿಲ್ಲ. 1980ರಲ್ಲಿ ಭಾರತ– ಪಾಕ್ ನಡುವೆ ಕಲಾವಿದರ ವಿನಿಮಯ ಒಪ್ಪಂದದ ಬಳಿಕ ರೇಷ್ಮಾ ಭಾರತಕ್ಕೆ ಬಂದು ಕಾರ್ಯಕ್ರಮ ನೀಡತೊಡಗಿದರು.

ರೇಷ್ಮಾ ಹಾಡಿದ 'ಲಂಬೀ ಜುದಾಯಿ..' (ಸುಭಾಶ್ ಘಾಯ್ ಅವರ 'ಹೀರೋ' ಚಿತ್ರದ ಗೀತೆ)ಮತ್ತು 'ದಮಾ ದಮ್ ಮಸ್ತ್ ಕಲಂದರ್' ಹಾಡುಗಳನ್ನು ಇವತ್ತಿಗೂ ಲಕ್ಷಾಂತರ ಜನರು ಆಸ್ವಾದಿಸುತ್ತಾರೆ. ಬೇರೆಯವರು ಅದೇ ಹಾಡುಗಳನ್ನು ಹಾಡಿದ್ದು ಕೇಳಿಸಿಕೊಳ್ಳುವಾಗ ರೇಷ್ಮಾರ ಸಿರಿಕಂಠದ ಮಹತ್ವ ಗೊತ್ತಾಗುತ್ತದೆ.

ಈ 'ಮರುಭೂಮಿಯ ಕೋಗಿಲೆ' ಇತ್ತೀಚೆಗೆ, 'ದೇಶದ ಗಡಿಗಳು ನನ್ನನ್ನು ಭಾದಿಸುವುದಿಲ್ಲ. ಸಂಗೀತಕ್ಕೆ ಗಡಿಗಳೇ ಇಲ್ಲ' ಎಂದಿದ್ದರು. ಸದ್ಯಕ್ಕೆ ಆಕೆಯ ಮಗ ಉಮರ್ ತಾಯಿಯ ಗಾಯನ ಪರಂಪರೆಯನ್ನು ಮುಂದುವರಿಸುತ್ತಿದ್ದಾನೆ.

## ಕೀರ್ತಿವಂತೆ ಕೊಚ್ಚಾರ್

ಚಂದಾ ಕೊಚ್ಚಾರ್ ಮತ್ತೆ ಸುದ್ದಿಯಲ್ಲಿದ್ದಾರೆ– ಮತ್ತೊಂದು ಒಳ್ಳೆಯ ಕಾರಣಕ್ಕೆ. ಸತತ ಎರಡನೇ ಬಾರಿ ಅವರು 'ಭಾರತದ ಬಿಸಿನೆಸ್ ಕ್ಷೇತ್ರದಲ್ಲಿ ಅತ್ಯಂತ ಪ್ರಭಾವಶಾಲಿ ಮಹಿಳೆ' ಎಂಬ ಹೆಗ್ಗಳಿಕೆ ಪಡೆದಿದ್ದಾರೆ. ಐಸಿಐಸಿಐ ಬ್ಯಾಂಕ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಓ ಆಗಿರುವ ಚಂದಾ ಕೊಚ್ಚಾರ್, 2 ವರ್ಷಗಳ ಹಿಂದೆ 'ಜಗತ್ತಿನ ಅತ್ಯಂತ ಪ್ರಭಾವಶಾಲಿ 50 ಮಹಿಳೆಯರ' ಪಟ್ಟಿಯಲ್ಲೂ 10ನೇ ಸ್ಥಾನ ಪಡೆದು ಭಾರತಕ್ಕೆ ಹೆಮ್ಮೆ ತಂದಿದ್ದರು.

ರಾಜಸ್ತಾನದ ಜೋಧ್‌ಪುರದಲ್ಲಿ ಜನಿಸಿದ ಚಂದಾ (ಬರ್ತ್‌ಡೇ 17/11/1961) ಜೈಪುರದಲ್ಲಿ ಆರಂಭಿಕ ಶಿಕ್ಷಣ ಮುಗಿಸಿ ಬಳಿಕ ಮುಂಬೈಯಲ್ಲಿ ಕಾಲೇಜು ಸೇರಿದರು. ಬಿಎ ಆದ ಬಳಿಕ ಕಾಸ್ಟ್ ಅಕೌಂಟೆನ್ಸಿ ಯಲ್ಲಿ ಐಸಿಡಬ್ಲ್ಯುಎಐ ಪದವಿ ಪಡೆದರು. ಜಮ್ನಾಲಾಲ್ ಬಜಾಜ್ ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ಮಾಸ್ಟರ್ಸ್ ಪಡೆದಾಗ ಎರಡು ಚಿನ್ನದ ಪದಕಗಳನ್ನು ಗೆದ್ದದ್ದು ಅವರ ಪ್ರತಿಭೆಗೆ ಸಾಕ್ಷಿ. ಐಸಿಐಸಿಐ ಬ್ಯಾಂಕ್ 2001ರಿಂದ ಸತತವಾಗಿ 4 ವರ್ಷಗಳ 'ಭಾರತದ ಅತ್ಯುತ್ತಮ ರಿಟೇಲ್ ಬ್ಯಾಂಕ್' ಎಂಬ ಪ್ರಶಸ್ತಿ ಪಡೆದಿದೆ. ಹಾಗೆಯೇ ಚಂದಾ ಕೊಚ್ಚಾರ್ ಅವರೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಬ್ಯಾಂಕರ್ ಪ್ರಶಸ್ತಿ ಪಡೆದಿದ್ದಾರೆ. ಭಾರತದ ಖಾಸಗಿ ಬ್ಯಾಂಕ್‌ಗಳ ಪೈಕಿ ಐಸಿಐಸಿಐ ಬ್ಯಾಂಕ್ ಮೊದಲ ಸ್ಥಾನ ಪಡೆಯುವಲ್ಲಿ ಚಂದಾ ಅವರ ಮಾರ್ಗದರ್ಶನದ ಶ್ರಮವೂ ಇದೆ. ಮಹಿಳೆಯರು ಹಣಕಾಸು ನಿರ್ವಹಣೆಯಲ್ಲಿ ಅತ್ಯುತ್ತಮರು ಎನ್ನುವುದು ಭಾರತೀಯ ಕುಟುಂಬಗಳ ನಂಬಿಕೆ. ಅದನ್ನು ವಿಶ್ವಮಟ್ಟದಲ್ಲೂ ಸಾಧಿಸಿ ತೋರಿಸಿರುವ ಚಂದಾ ಕೊಚ್ಚಾರ್ ಇನ್ನಷ್ಟು ಎತ್ತರಕ್ಕೆ ಏರಲಿ.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65